ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ Telephone: 0831-2407201, 0831-2407206, 0831-2407213

ಫ್ಯಾಕ್ಸ/Fax: 0831-2429662

e-mail: ceozpbelgaum@yahoo.com

---

ವಿಷಯ:- ಸನ್ 2012-13 ಸಾಲಿನ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ SC Component ರಡಿ ಕೇಂದ್ರ ಸಹಾಯಧನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:-1)ಸರ್ಕಾರದ ಪತ್ರ ಕ್ರಮಾಂಕ:ಗ್ರಾಅಪ:51:ಜೈಅಯೋ:2012 ದಿ:17-09-12.
2)ಸರ್ಕಾರದ ಪತ್ರ ಕ್ರಮಾಂಕ:ಗ್ರಾಅಪ:21:ಜೈಅಯೋ:2012 ದಿ:17-12-12.
3)ಸರ್ಕಾರದ ಪತ್ರ ಕ್ರಮಾಂಕ:ಗ್ರಾಅಪ:08:ಜೈಅಯೋ:2013 ದಿ:23-12-12.
4)ಈ ಕಾರ್ಯಾಲಯದ ಆದೇಶ ಕ್ರಮಾಂಕ ಸಮಸಂಖ್ಯೆ ದಿ:27-2-2013

***

**ಪ್ರಸ್ತಾವಣೆ:**

ಸನ್ 2012-13ನೆಯ ಸಾಲಿನ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ ಅನುಷ್ಠಾನ ಕುರಿತು ಸರ್ಕಾರವು ಉಲ್ಲೇಖಿತ ಪತ್ರ(1)ರಡಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಉಲ್ಲೇಖಿತ ಪತ್ರ(2) ರ ಮೇರೆಗೆ SC Component ರಡಿ 172 ಜೈವಾನಿಲ ಸ್ಥಾವರಗಳ ನಿರ್ಮಾಣದ ಭೌತಿಕ ಗುರಿಯನ್ನು ನಿಗದಿ ಪಡಿಸಿರುತ್ತಾರೆ. ಈ ಕುರಿತಂತೆ ವರ್ಷಾಂತ್ಯಕ್ಕೆ SC Component ರಡಿ 69 ಜೈವಾನಿಲ ಸ್ಥಾವರಗಳು ನಿರ್ಮಾಣವಾಗಿರುತ್ತವೆ. ಹಾಗೂ ಉಲ್ಲೇಖಿತ(3)ರಡಿ ಸರ್ಕಾರದಿಂದ SC Component ರಡಿ ₹.5.51 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಈ ಕುರಿತಂತೆ ಉಲ್ಲೇಖಿತ(4)ರ ಈ ಕಾರ್ಯಾಲಯದ ಆದೇಶದನ್ವಯ ಈಗಾಗಲೇ SC Component ರಡಿ 34 ಜೈವಾನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ ₹.3.268 ಲಕ್ಷಗಳನ್ನು ಬಿಡುಗಡೆ ಮಾಡಿಲಾಗಿದೆ ಬಾಕಿ ಉಳಿದ ಅನುದಾನ ₹.2.242 ಲಕ್ಷಗಳನ್ನು ಪ್ರಸ್ತುತ ಬಾಕಿ ಉಳಿದಿದ್ದ 35 ಜೈವಾನಿಲ ಸ್ಥಾವರಗಳ ಪೈಕಿ 23 ಜೈವಾನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ, ಶೌಚಾಲಯ ಸಂಪರ್ಕಿತ ಪ್ರೋತ್ಸಾಹಧನ ಹಾಗೂ ಟರ್ನ ಕೀ ಫೀ ಒಟ್ಟು ₹.2.231 ಲಕ್ಷ ಹಾಗೂ ಬಾಕಿ ಉಳಿಯುವ ₹.0.011 ಲಕ್ಷಗಳು ಸೇರಿದಂತೆ ಒಟ್ಟು ₹.2.242 ಲಕ್ಷಗಳನ್ನು ಮರು ಹಂಚಿಕೆ ಮಾಡಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಕ್ರಮಾಂಕ:ಜಿಪಂ:ಅವಿ:ರಾಜೈಅಯೋ:ವಿವ-2:12-13 ಬೆಳಗಾವಿ ದಿನಾಂಕ: -07-2013

ಪ್ರಸ್ತಾವಣೆಯಲ್ಲಿ ವಿವರಿಸಿದ ಅಂಶಗಳನ್ವಯ, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ SC Componentರಡಿ ಸನ್ 2012-13ನೆಯ ಸಾಲಿನ ಬಿಡುಗಡೆಯಾದ ಅನುದಾನ ₹.5.51 ಲಕ್ಷಗಳಲ್ಲಿ II ಹಂತದಡಿ ಸಲ್ಲಿಕೆಯಾದ 35 ಜೈವಾನಿಲ ಸ್ಥಾವರಗಳ ಪೈಕಿ 23 ಜೈವಾನಿಲ ಸ್ಥಾವರಗಳ ಕೇಂದ್ರ ಸಹಾಯಧನ ₹.2.242 ಲಕ್ಷಗಳನ್ನು ಅನುಬಂಧ-I ರಲ್ಲಿ ವಿವರಿಸಿದಂತೆ ಈ ಕೆಳಗೆ ಕಾಣಿಸಿದ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

(₹.ಲಕ್ಷಗಳಲ್ಲಿ)

| ಕ್ರ.ಸಂ | ತಾಲೂಕು | ಅನುಷ್ಠಾನಾಧಿಕಾರಿ | ಸ್ಥಾವರ ಸಂಖ್ಯೆ | ಬಿಡುಗಡೆ ಮಾಡಿದ ಅನುದಾನ |
|---|---|---|---|---|
| 1 | ರಾಯಬಾಗ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ | 02 | 0.194 |
| 3 | ಬೆಳಗಾವಿ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ | 7 | 0.69 |
| 5 | ಖಾನಾಪೂರ | ಸಹಾಯಕ ಕೃಷಿ ನಿರ್ದೇಶಕರು. | 14 | 1.358 |
| | | ಒಟ್ಟು | 23 | 2.242 |

ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ ಬೆಳಗಾವಿರವರು ಈಗಾಗಲೇ ತಮ್ಮ ಕಾರ್ಯಾಲಯಕ್ಕೆ ಬಿಡುಗಡೆಯಾದ ಅನುದಾನ ₹.2.242 ಲಕ್ಷಗಳನ್ನು ಮೇಲ್ಕಾಣಿಸಿದಂತೆ ಹಂಚಿಕೆ ಮಾಡಿ ಆದೇಶಿಸಿದ ಪ್ರಕಾರ ಆಯಾ ತಾಲೂಕಾ ಅನುಷ್ಠಾನಾಧಿಕಾರಿಗಳಿಗೆ ಡಿಡಿ/ಚೆಕ್ ಮೂಲಕ ಅನುದಾನವನ್ನು ಸಂದಾಯ ಮಾಡತಕ್ಕದ್ದು.

**ನಿಬಂಧನೆಗಳು:**

1) ಟರ್ನ ಕೀ ಸಂಸ್ಥೆಯವರುಗಳಿಗೆ ಸಹಾಯಧನ ಪಾವತಿಸುವ ಪೂರ್ವದಲ್ಲಿ ಸದರಿಯವರು ಖಾಯಂ ರಜಿಸ್ಟರನಲ್ಲಿ ಫಲಾನುಭವಿವಾರು, ಗ್ರಾಮವಾರು ಜೈವಾನಿಲ ಸ್ಥಾವರ ಸ್ಥಾಪಿಸಿದ ವಿವರವನ್ನು ಪರಿಶೀಲಿಸಿ ದೃಢಿಕರಿಸತಕ್ಕದ್ದು.
2) ಜೈವಿಕ ಅನಿಲ ಸ್ಥಾವರಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮತ್ತೊಮ್ಮೆ ಖಚಿತ ಪಡಿಸಿಕೊಂಡು ಸಹಾಯಧನ ಪಾವತಿಸಿತಕ್ಕದ್ದು.
3) ಫಲಾನುಭವಿಯಿಂದ ಸದರಿ ಜೈವಾನಿಲ ಸ್ಥಾವರಕ್ಕೆ ಬೇರೆ ಇಲಾಖೆ/ಕಾರ್ಯಕ್ರಮದಡಿ ಸಹಾಯಧನ ಪಡೆದಿಲ್ಲದಿರುವ ಬಗ್ಗೆ ಪ್ರಮಾಣ ಪತ್ರ ಪಡೆಯತಕ್ಕದ್ದು.
4) ಕಾಲಕಾಲಕ್ಕೆ ಸರ್ಕಾರ ಹಾಗೂ ಈ ಕಾರ್ಯಾಲಯದಿಂದ ಹೊರಡಿಸಿದ ಆದೇಶಗಳಲ್ಲಿ ನೀಡಲಾದ ನಿಭಂದನೆಗಳನ್ನು ಪಾಲಿಸತಕ್ಕದ್ದು.
5) ಜೈವಾನಿಲ ಸ್ಥಾವರದ ಹೊರದ್ವಾರ (out let tank)ಕ್ಕೆ ಕಡ್ಡಾಯವಾಗಿ ಮುಚ್ಚಳಿಕೆ ಹಾಕಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಸಹಾಯಧನ ಪಾವತಿಸತಕ್ಕದ್ದು.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಬೆಳಗಾವಿ, ರಾಯಬಾಗ ಹಾಗೂ ಸಹಾಯಕ ಕೃಷಿ ನಿರ್ದೇಶಕರು, ಖಾನಾಪೂರ ಇವರಿಗೆ.
2) ಸಂಬಂಧಿಸಿದ ಟರ್ನ ಕೀ ಸಂಸ್ಥೆಗಳಿಗೆ